ನಮ್ಮದೊಂದು ಎಲ್ಲೆ ಹೇಳೋದಂತ..." ನೋವು ತುಂಬಿಕೊಂಡೇ ಹೇಳಿದರು. ನಾನು ಕೊಂಚ ಗಟ್ಟಿಯಾಗಿ "ಸುನಯ್ ನನಗೂ ಮಗಾನ ವೈನಿ. ನೀವು ಅಂವನ್ನ ಕರಕೊಂಡು ಬಂದು ಮತ್ತ ಧಾರವಾಡದ ವಿದ್ಯಾಪ್ರಗತಿ ವಸತಿ ಸಾಲಿಗ್ಹಾಕ್ರಿ. ನಾ ಸಂಡೇ, ಸಂಡೇ ಹೋಗಿ ಅಂವನ್ನ ಭೆಟ್ಟ್ಯಾಗತೇನಿ. ಮನಿಗೆ ಕರಕೊಂಡು ಬರ್ತೇನಿ. ನೀವು ಅಂವನ ಬಗ್ಗೆ ಕಾಳಜಿ ಮಾಡಬ್ಯಾಡ್ರಿ. ಮತ್ತ... ಸುಜಾತಾನ ಮಾತು ಸ್ವಲ್ಪ ಸೊಟ್ಟ ಇರ್ತಾವ. ತಲಿಗ್ಹಚಗೋಬ್ಯಾಡ್ರಿ" ಎಂದು ಮನಃಪೂರ್ವಕವಾಗೇ ಹೇಳಿದೆ. ವೈನಿ ದೊಡ್ಡ ಭಾರ ಇಳಿದವರಂತೆ "ಥ್ಯಾಂಕ್ಸ ಭಾವಜಿ. ಭಾಳ ಛೊಲೊ ಆತು. ಕಿರಣ ಬಂದ ಕೂಡ್ಲೆ ಹೇಳ್ತೇನಿ. ನಾವು ಇದರ ಬಗ್ಗೆ ವಿಚಾರ ಮಾಡ್ತೇವಿ" ಎನ್ನುತ್ತ ಇತರ ಕುಶಲೋಪರಿಯೊಂದಿಗೆ ಮುಗಿಸಿದರು. ಅದೇಕೋ ಸುನಯ್‌ನನ್ನು ಕಂಡರೆ ನನಗೆ ವಿಶೇಷ ಅಕ್ಕರೆ. ಎಲ್ಲ ಚೆನ್ನಾಗಿರುವವರ ಮಧ್ಯೆ ಈ ಮಗುವೊಂದು ದೃಷ್ಟಿಬೊಟ್ಟಾಯಿತಲ್ಲ. ಹೇಗಾದರೂ ಸುಧಾರಿಸಬೇಕು ಎನ್ನುವ ಕಳಕಳಿ ಇತ್ತು. ಜೊತೆಗೆ ಈಗ ಕೊಂಚ ಸ್ವಾರ್ಥವೂ ಇಲ್ಲದೇ ಇರಲಿಲ್ಲ. ಸುಲಭಾ ವೈನಿ ನನಗೆ ದೊಡ್ಡ ದಾಳ. ಮುಂದೆ ನಾನು ಮನೆ ಬರೆಸಿಕೊಂಡಾಗಲೂ ಅವರು ಮಗನಿಗೋಸ್ಕರ "ಇರ್ಲಿ ಬಿಡ್ರಿ" ಎಂದು ಬಿಟ್ಟರೆ ಕಿರಣ ಮಾತನಾಡುವದಿಲ್ಲ. ಅಲ್ಲಿಗೆ ಅರ್ಧ ಸಮಸ್ಯೆ ಬಗೆಹರಿದಂತೆಯೇ.

**'ಉರಗ ಭೂಷಣ ನೀನು. ಸರ್ಪ ಬಿಟ್ಟ ಬಂದ ಬಿಟ್ಟೇಯಲಾ...' ಎಂದು ಕೇಳಿದಳು. 'ಒಳ್ಳೇ ಪತ್ತೇದಾರಿ ಕೆಲಸ ಮಾಡುವವಳಂತೆ ಪ್ರಶ್ನೆ ಕೇಳುತ್ತಿದ್ದಾಳಲ್ಲ. ದೇವರಿಗೆ ತನಗೆ ಬೇಕಾದ ಹಾಗೆ ಬರಲು ಸ್ವಾತಂತ್ರ್ಯವಿಲ್ಲವೆ?' ಎಂದುಕೊಂಡೆ. 'ಅದನ್ನು ನೋಡಿದರೆ ನಿನಗೆ ಭಯವಾಗುತ್ತದೆ ಭಕ್ತೆ. ಅದಕ್ಕೆ ಕೈಲಾಸದಲ್ಲೇ ಬಿಟ್ಟು ಬಂದೆ' ಎಂದು ತಡವರಿಸುತ್ತ ಹೇಳಿದೆ.**

ಮರುದಿನ ನನ್ನ ಶಿವ ಪುರಾಣವನ್ನು ಪೂರ್ಣಗೊಳಿಸಬೇಕು, 'ಮಗ ಎಲ್ಲಿ ಹೇಳುತ್ತಾನೋ ಅಲ್ಲಿ ಸಹಿ ಹಾಕಿ ಹಾಯಾಗಿರು' ಎಂದು ಹೇಳಿ ಇತಿಶ್ರೀ ಹಾಡಬೇಕೆಂಬ ಹುಮ್ಮಸ್ಸಿನಲ್ಲೇ ಎದ್ದೆ. ಬೆಳಗಾಗುವಷ್ಟರಲ್ಲೇ ಸುರೇಶನ ಗೆಳೆಯನಿಂದ ಪೇಮೆಂಟ್ ಬಂದಿತ್ತು. ಸರಕು ಚೆನ್ನಾಗಿದೆಯೆಂಬ ಹೊಗಳಿಕೆಯ ಜೊತೆಗೆ ಇನ್ನೊಂದು ದೊಡ್ಡ ಆರ್ಡರ್ ಕೂಡ. ಅವನ ಸ್ನೇಹಿತನದೂ ಇತ್ತಂತೆ. "ಎರಡೂ ಆರ್ಡರ್ ಎಂಟ ದಿನದಾಗ ಕಳಸ್ಲಿಕ್ಕಾಗ್ತದಲಾ?..." ಎಂದು ಫೋನ್ ಮಾಡಿ ಕೇಳಿದರು. "ಅಫ್ಕೋರ್ಸ್" ಎಂದವನೇ ಎರಡೇ ನಿಮಿಷದಲ್ಲಿ ಸ್ನಾನದ ಶಾಸ್ತ್ರ ಮುಗಿಸಿ ಫ್ಯಾಕ್ಟರಿಯತ್ತ ದೌಡಾಯಿಸಿದೆ. ಸರಸರನೆ ಮಾಲು ಸಿದ್ಧ ಮಾಡಲು ಹೇಳಿದೆ. ದೊಡ್ಡ ಆರ್ಡರ್ ಬರದೇ ಎಷ್ಟೋ ದಿನಗಳಾಗಿತ್ತು. ಮೈಯೆಲ್ಲ ಹುರುಪು ತುಂಬಿಕೊಂಡಿತ್ತು. ಮನೆಯ ಚಿಂತೆ ಇರಲಿಲ್ಲ. ಅವ್ವನ ಬಳಿ ಸಹನಾ ಇದ್ದಳಲ್ಲ... ನಾನೇ ಓಡಾಡಿ ಹೆಚ್ಚಿಗೆ ಕೆಲಸಗಾರರನ್ನು ಕರೆತಂದೆ. ಒಂದು ನಿಮಿಷ ಬಿಡುವಿರದಂತೆ ನಾನೇ ಮೊದಲು ದುಡಿದೆ. ಬೀಡಿ ಸೇದುತ್ತ ಸಮಯ ಕಳೆಯಲು ಕೆಲಸಗಾರರರಿಗೆ ಧೈರ್ಯವಾಗಲಿಲ್ಲ. ಭರಾಟೆಯಿಂದ ಕೆಲಸ ನಡೆಯಿತು.